# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಲಂ 88ರನ್ವಯ ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿಯನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ರಾಜ್ಯ ನಿಯಮಾವಳಿ ಅಧಿಸೂಚನೆ ಸಂಖ್ಯೆ: ಮಮಇ 209 ಪಿಹೆಚ್ ಪಿ 2017(ಭಾಗ-2), ದಿನಾಂಕ:30.08.2019.
2. ವಿಹಿನಿ/ವಿವ್ಯೆಹಅ-2016/ರಾನಿ/30/2019-20/2394, ದಿನಾಂಕ: 31.10.2019.

*****

**ಪ್ರಸ್ತಾವನೆ:**

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಲಂ 88ರನ್ವಯ ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ಸರ್ಕಾರವು ರಾಜ್ಯ ನಿಧಿಯನ್ನು ಸ್ಥಾಪಿಸತಕ್ಕದೆಂದು ತಿಳಿಸಲಾಗಿರುತ್ತದೆ. ಪ್ರಸ್ತಾಪಿತ ಅಧಿನಿಯಮದಡಿ ಮೇಲೆ ಓದಲಾದ ಕ್ರ.ಸಂ (1)ರ ಅಧಿಸೂಚನೆಯನ್ವಯ ರೂಪಿಸಲಾಗಿರುವ ರಾಜ್ಯ ನಿಯಮಾವಳಿಯ ಕಲಂ 41ರಡಿ ರಾಜ್ಯ ನಿಧಿ ನಿರ್ವಹಣೆಗಾಗಿ ಆಡಳಿತ ಮಂಡಳಿಯನ್ನು ರಚಿಸುವುದರೊಂದಿಗೆ ಕಲಂ 42ರಲ್ಲಿ ರಾಜ್ಯ ನಿಧಿಯ ನಿರ್ವಹಣೆ ಮತ್ತು ಉಪಯುಕ್ತತೆಯ ಬಗ್ಗೆ ವಿವರವಾಗಿ ಉಲ್ಲೇಖಿಸಲಾಗಿರುತ್ತದೆ. ಅಧಿನಿಯಮದ ಕಲಂ 88 (3)ರಲ್ಲಿ ಪ್ರತಿಯೊಂದು ರಾಜ್ಯ ಸರ್ಕಾರವು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂತಹ ನಮೂನೆಯಲ್ಲಿ ಆದಾಯ ವೆಚ್ಚಗಳ ಲೆಕ್ಕಗಳನ್ನೊಳಗೊಂಡಂತೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಲೆಕ್ಕ ಪತ್ರಗಳನ್ನು ಮತ್ತು ಇತರೆ ದಾಖಲಾತಿಗಳನ್ನು ಇಡತಕ್ಕದೆಂದು ಹಾಗೂ ಸದರಿ ಕಲಂ ನ ಉಪ ಬಂಧ 5ರಲ್ಲಿ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಮಹಾ ಲೇಖಪಾಲರಿಂದ ಲೆಕ್ಕ ಪರಿಶೋಧಿಸುವ ಸಂಧರ್ಭದಲ್ಲಿ ಅವರಿಂದ ನೇಮಕಗೊಂಡ ವ್ಯಕ್ತಿಯು ವಿಶೇಷ ಅಧಿಕಾರವನ್ನು ಹಾಗೂ ರಾಜ್ಯ ನಿಧಿಯ ಯಾವುದೇ ಕಛೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದೆಂದು ಪ್ರಸ್ತಾಪಿಸುತ್ತಾ, ಸದರಿ ಕಲಂ ನ ಉಪ ಬಂಧ 6ರಲ್ಲಿ ಭಾರತದ ಲೆಕ್ಕ ನಿಯಂತ್ರಕ ಮತ್ತು ಲೆಕ್ಕ ಪರಿಶೋಧಕರು ಅಥವಾ ಅವರಿಂದ ನೇಮಕ ಗೊಂಡ ಯಾವುದೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯ ಲೆಕ್ಕ ಪತ್ರಗಳನ್ನು ಹಾಗೂ ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವರದಿಗಳೊಂದಿಗೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದೆಂದು ತಿಳಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಅಧಿನಿಯಮ 2016 ಹಾಗೂ ರಾಜ್ಯ ನಿಯಮಾವಳಿಗಳಲ್ಲಿ ರೂಪಿಸಿರುವಂತೆ ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿಯನ್ನು ಸ್ಥಾಪಿಸಿ ಆದೇಶವನ್ನು ಹೊರಡಿಸುವಂತೆ ಮೇಲೆ ಓದಲಾದ ಕ್ರ.ಸಂ(2)ರ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 151 ಪಿಹೆಚ್‌ಪಿ 2019, ಬೆಂಗಳೂರು, ದಿನಾಂಕ:20.03.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಲಂ 88ರಲ್ಲಿ ವ್ಯಕ್ತವಾಗಿರುವಂತೆ ಅಂಗವಿಕಲ ವ್ಯಕ್ತಿಗಳಿಗಾಗಿ ಈ ಕೆಳಕಂಡ ವಿವಿಧ ಮೂಲಗಳಿಂದ ಸಂಗ್ರಹಿಸಲ್ಪಡುವ ಎಲ್ಲಾ ಮೊತ್ತಗಳನ್ನೊಳಗೊಂಡ ರಾಜ್ಯ ನಿಧಿಯನ್ನು ಸ್ಥಾಪಿಸಿ ಆದೇಶಿಸಿದೆ.

1. ಅನುದಾನ, ಉಡುಗೊರೆ, ದಾನ ಹಾಗೂ ಉಯಿಲುಗಳು ಅಥವಾ ವರ್ಗಾವಣೆ ಮೂಲಗಳಿಂದ.
2. ರಾಜ್ಯ ಸರ್ಕಾರದಿಂದ ಸ್ವೀಕೃತವಾಗುವ ಸಹಾಯಾನುಧಾನ.
3. ರಾಜ್ಯ ಸರ್ಕಾರವು ನಿರ್ಧರಿಸುವ ಇತರೆ ಯಾವುದೇ ಮೂಲಗಳಿಂದ.

ಪ್ರಸ್ತಾಪಿತ ರಾಜ್ಯ ನಿಧಿಯನ್ನು ಉಪಯೋಗಿಸುವ ಕುರಿತು ಮಾರ್ಗಸೂಚಿಗಳನ್ನು ನಂತರದಲ್ಲಿ ಹೊರಡಿಸಲಾಗುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆರವರ ಟಿಪ್ಪಣಿ ಸಂಖ್ಯೆ:ಎಫ್‌ಡಿ 87 ವೆಚ್ಚ-10/2020 ದಿ:04.03.2020ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

M. Rajanna

(ಎಂ. ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ &ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ,"ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 1.
4. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಬೆಂಗಳೂರು.
5. ರಾಜ್ಯ ಆಯುಕ್ತರು, ಅಂಗವಿಲ ವ್ಯಕ್ತಿಗಳ ಅಧಿನಿಯಮ ಕಛೇರಿ, ಅಭಯ ಸಂಕೀರ್ಣ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 021.
6. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ಬೆಂಗಳೂರು.
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಓ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.